**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.63/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ಕರಿಬಸಮ್ಮ |
| ಗಂಡನ ಹೆಸರು | : | ಈಶ್ವರಗೌಡ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕೆಚೇನಹಳ್ಳಿ, ಜಗಳೂರು ತಾಲ್ಲೂಕು |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 7

ದಿ: 09-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.ಎಸ್.)**:

1. ಚಾಸಾ-1 ನನ್ನ ಗಂಡ. ಚಾಸಾ-2 ರಿಂದ 6, 8 ರಿಂದ 11 ರವರ ಪರಿಚಯ ಇದೆ. ಮೃತ ಬಸವರಾಜ ನನ್ನ ಮೈದುನ. ಮೃತ ಬಸವರಾಜರವರ ಮದುವೆ ಉಮಾರವರ ಜೊತೆ ಆಗಿತ್ತು. ಉಮಾ ಅಂದರೆ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ. ಬಸವರಾಜ ಮತ್ತು ಉಮಾ ಪ್ರೀತಿಸಿ ಮದುವೆಯಾಗಿದ್ದರು. ಕೆಚೇನಹಳ್ಳಿಯಲ್ಲಿ ಅವರು ವಾಸವಿದ್ದರು. ಅವರಿಗೆ ಇಬ್ಬರು ಮಕ್ಕಳು ಒಂದು ಗಂಡು ಮತ್ತು ಒಂದು ಹೆಣ್ಣು. ಮಗಳ ಹೆಸರು ಹರ್ಷಿತಾ. ಆಕೆಯು ಅವರ ಅಜ್ಜಿಯ ಜೊತೆ ಭಾತಿಯಲ್ಲಿ ವಾಸವಿದ್ದಳು. ಚಾಸಾ-6 ನನ್ನ ಮೈದುನ. ಅವರು ಬೇರೆಯಾಗಿ ಕೆಚೇನಹಳ್ಳಿಯಲ್ಲಿ ವಾಸವಿದ್ದಾರೆ.

2. ಮೃತ ಬಸವರಾಜ ಮತ್ತು ಉಮಾರವರ ಮದುವೆಯಾಗಿ 02 ವರ್ಷಗಳ ನಂತರ, 1 ನೇ ಆರೋಪಿಯು ಮೃತ ಬಸವರಾಜರವರಿಗೆ "ನೀನು ಶ್ರೀಮಂತ ಅಂತ ಮದುವೆಯಾದೆ, ನೀನು ಶೀಟಿನ

ಮನೆಯಲ್ಲಿದೀಯಾ, ನಿನ್ನ ಜೊತೆ ಬಾಳಲು ಇಷ್ಟ ಇಲ್ಲ, ಡಿವೋರ್ಸ್ ಕೊಡು, ನೀನು ಸತ್ತರೆ ನಾನು ನೆಮ್ಮದಿಯಾಗಿ ಚೆನ್ನಾಗಿರುತ್ತೇನೆ" ಅಂತ ಹೇಳುತ್ತಿದ್ದರು. ಇದರಿಂದ ಬಸವರಾಜರವರು ಮಾನಸಿಕವಾಗಿ ಬೇಸರಗೊಂಡಿದ್ದರು. ನಂತರ ಉಮಾರವರು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದರು. 02-03 ಸಲ ಕೋರ್ಟ್‌ಗೆ ಹೋಗಿ ಬಂದಿದ್ದರು. ಒಮ್ಮೆ 1 ನೇ ಆರೋಪಿಯು ಇದ್ದಕ್ಕಿದ್ದ ಹಾಗೆ ಮನೆ ಬಿಟ್ಟು ಹೋಗಿದ್ದರು, ಮೃತ ಬಸವರಾಜರವರು 1 ನೇ ಆರೋಪಿಯನ್ನು ಎಲ್ಲಾ ಕಡೆ ಹುಡುಕಾಡಿದರೂ ಸಿಗದೇ ಇರುವುದರಿಂದ ಜಗಳೂರು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು.

3. ದೂರು ಕೊಟ್ಟ ಒಂದು ತಿಂಗಳ ನಂತರ 1 ನೇ ಆರೋಪಿಯು ಮೈಸೂರಿನಲ್ಲಿ ಸುನಿಲರವರ ಜೊತೆ ಇರುತ್ತಾರೆ ಅಂತ ತಿಳಿದು ಬಂತು. ಸುನಿಲ್ ಜೊತೆ 1 ನೇ ಆರೋಪಿಯು ಇಷ್ಟಪಟ್ಟು ಅವನ ಜೊತೆಯಲ್ಲಿ ಇರುತ್ತೇನೆ ಅಂತ ಹೇಳಿ ಅವರ ಜೊತೆ ಹೋಗಿದ್ದರು. ಮೈಸೂರಿನಿಂದ ಬಂದ ನಂತರ 1 ನೇ ಆರೋಪಿಯು ಭಾತಿಯಲ್ಲಿರುವ ತನ್ನ ತಂದೆಯ ಮನೆಯಲ್ಲಿ ವಾಸವಿದ್ದರು. 1 ನೇ ಆರೋಪಿಗೆ ಬುದ್ದಿ ಹೇಳಿ ಗಂಡನ ಜೊತೆ ವಾಸ ಇರಬೇಕು ಅಂತ ಹೇಳಿದರು. 1 ನೇ ಆರೋಪಿಯು ಮೃತ ಬಸವರಾಜರವರಿಗೆ ಬೇರೆ ಮನೆ ಮಾಡಲು ಒತ್ತಾಯ ಮಾಡಿದರು. ಅದರಂತೆ ಮೃತ ಬಸವರಾಜರವರು ಬೇರೆ ಮನೆ ಮಾಡಿ ಕರೆದುಕೊಂಡು ಬಂದರು. 1 ನೇ ಆರೋಪಿಯು ಅಲ್ಲಿ ಒಂದು ವಾರ ಸಹ ಇರಲಿಲ್ಲ. ನಂತರ ಜಗಳೂರಿನಲ್ಲಿ ಬಾಡಿಗೆ ಮನೆ ಮಾಡಿದರು. ಈ ಮನೆಯ ಮಾಲೀಕರು ಒಂದು ತಿಂಗಳು ಇರಬೇಕು ಅಂತ ಹೇಳಿದರು. ಆ ಮನೆಯಲ್ಲಿ ಮೃತ ಬಸವರಾಜ, 1 ನೇ ಆರೋಪಿ ಮತ್ತು ಅವರ ಮಕ್ಕಳು ವಾಸವಿದ್ದರು. ಆ ಮನೆಯಲ್ಲಿ ಬಸವರಾಜರವರುತನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಸಾಮಾನು ತರಲು ಹೋದರು. ಮೃತ ಬಸವರಾಜರವರು ಸಾಮಾನು ತೆಗೆದುಕೊಂಡು ಬರುವಷ್ಟರಲ್ಲಿ ಎರಡು ಮಕ್ಕಳನ್ನು ಆ ಬಾಡಿಗೆ ಮನೆಯಲ್ಲಿ ಬಿಟ್ಟು ಹೊರಗಡೆಯಿಂದ ಬೀಗ ಹಾಕಿ ಎಲ್ಲೋ ಹೊರಟುಹೋಗಿದ್ದರು. ಮಕ್ಕಳು ಅಳುವುದನ್ನು ನೋಡಿ ಅಕ್ಕಪಕ್ಕದವರು ಮೃತ ಬಸವರಾಜರವರಿಗೆ ವಿಷಯ ತಿಳಿಸಿದರು.

ಬಸವರಾಜರವರು ಮಕ್ಕಳನ್ನು ದಿಃ 13-02-2025 ರಂದು ಕರೆದುಕೊಂಡು ಬಂದರು. ಮೃತ ಬಸವರಾಜರವರು "ನನ್ನ ಹೆಂಡತಿಗೆ ನನ್ನೊಂದಿಗೆ ವಾಸವಾಗಲು ಇಚ್ಛೆ ಇಲ್ಲ, ಡಿವೋರ್ಸ್ ಕೊಡು, ನೀನು ಸತ್ತರೇ ನಾನು ನೆಮ್ಮದಿಯಾಗಿ ಇರುತ್ತೇನೆ " ಅಂತ ಹೇಳಿರುವುದಾಗಿ ವ್ಯಕ್ತಪಡಿಸಿದರು. ಇದರಿಂದ ಬಸವರಾಜರವರು ಮನಸ್ಸಿಗೆ ನೋವು ಮಾಡಿಕೊಂಡು ಯಾರೊಂದಿಗೂ ಮಾತನಾಡುತ್ತಿರಲಿಲ್ಲ.

4. ದಿಃ 14-02-2025 ರಂದು ಮೃತ ಬಸವರಾಜರವರು ತಾನು ವಾಸವಾಗಿರುವ ಕೆಚೇನಹಳ್ಳಿಯ ಮನೆಯಲ್ಲಿ ನೇಣು ಹಾಕಿಕೊಂಡು ತೀರಿಕೊಂಡರು. ಆರೋಪಿತರೇ ಮೃತ ಬಸವರಾಜರವರ ಸಾವಿಗೆ ಕಾರಣ ಆಗಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಸಿ.ಟಿ.ಎಸ್., ವಕೀಲರಿಂದ 1 ನೇ ಆರೋಪಿತರ ಪರವಾಗಿ**:

5. ನಾನು ಮತ್ತು ನಮ್ಮ ಮೈದುನ ಬೇರೆ ಬೇರೆ ವಾಸವಿರುತ್ತೇವೆ. ನಮ್ಮ ಮನೆಯಿಂದ ನಮ್ಮ ಮೈದುನನ ಮನೆ ಅರ್ಧ ಕಿ.ಮೀ. ಗಿಂತ ಕಡಿಮೆ ಅಂತರ ಇದೆ. ಮೃತ ಬಸವರಾಜ ಮತ್ತು 1 ನೇ ಆರೋಪಿಯು ಹೇಗೆ ಜೀವನ ನಡೆಸುತ್ತಿದ್ದರು ಅಂತ ನಾನು ನೋಡಿಲ್ಲ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಮೃತ ಬಸವರಾಜರವರು ನಮಗೆ ತಿಳಿಸಿದ್ದರು. ನನ್ನ ಮತ್ತು ಮೃತ ಬಸವರಾಜರವರ ನಡುವೆ ಫೋನ್ ನಲ್ಲಿ ಸಂಭಾಷಣೆ ನಡೆದಿಲ್ಲ. ಮೃತ ಬಸವರಾಜರವರು ತಮ್ಮ ಕೆಲಸಕ್ಕಾಗಿ ಆಚೆ ಹೋಗುತ್ತಿದ್ದರು ಅಂದರೆ ನಿಜ. ನನ್ನ ಗಂಡ ಮತ್ತು ಮೃತ ಬಸವರಾಜರವರು ಪ್ರತಿದಿನ ಮಾತನಾಡುತ್ತಿರಲಿಲ್ಲ. ನಾನು ನನ್ನ ಅತ್ತೆಯೊಂದಿಗೆ ಇರುವುದಿಲ್ಲ. ನನಗೆ ಮತ್ತು ನನ್ನ ಅತ್ತೆ ವೈಮನಸ್ಸು ಇರುವುದರಿಂದ ಪ್ರತ್ಯೇಕ ಮನೆ ಮಾಡಿಕೊಂಡು ಇದ್ದೇವೆ ಅಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಹಾಗೂ ನನ್ನ ಗಂಡನ ತಮ್ಮ ಮತ್ತು ಅವರ ಹೆಂಡತಿ ಒಟ್ಟಿಗೆ ವಾಸವಿದ್ದೇವೆ ಅಂದರೆ ಸರಿಯಲ್ಲ, ನಾವು ಬೇರೆ ಬೇರೆ ವಾಸವಿದ್ದೇವೆ. ನನ್ನ ಗಂಡನ ಮನೆಯಲ್ಲಿ ಒಬ್ಬರಿಗೊಬ್ಬರಿಗೆ ಸಂಬಂಧ ಇಲ್ಲದೇ ಇರುವುದರಿಂದ ನಾವೆಲ್ಲರೂ ಬೇರೆ ಬೇರೆ ವಾಸವಿದ್ದೇವೆ ಅಂದರೆ 1 ನೇ ಆರೋಪಿಯ ಮದುವೆಗಿಂತ ಮುಂಚೆಯೇ ನಾವು ಬೇರೆಯಾಗಿದ್ದೆವು. ನನ್ನ

ಗಂಡನಿಗೆ 03 ಜನ ಅಣ್ಣ-ತಮ್ಮಂದಿರು ಇರುತ್ತಾರೆ. ನನ್ನ ಗಂಡನ 03 ಜನ ಅಣ್ಣ-ತಮ್ಮಂದಿರಲ್ಲಿ ಮೃತ ಬಸವರಾಜರವರು ಆರ್ಥಿಕವಾಗಿ ಚೆನ್ನಾಗಿ ಇದ್ದರು ಅಂದರೆ ನಿಜ. ಮೃತ ಬಸವರಾಜ ಮತ್ತು 1 ನೇ ಆರೋಪಿಯು ಮದುವೆ ಮಾಡಿಕೊಂಡ ಬಗ್ಗೆ ಆಕ್ಷೇಪ ಇತ್ತು ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಅವರು ಮದುವೆಯಾದ ನಂತರ ನಾವು ಸ್ವೀಕರಿಸಿದೆವು. ಮದುವೆಯಾದ ನಂತರ ಮೃತ ಬಸವರಾಜ ಮತ್ತು 1 ನೇ ಆರೋಪಿಯು ನಮ್ಮ ಮನೆಗೆ ಬರುವುದಾಗಲಿ ಮತ್ತು ಅವರ ಮನೆಗೆ ನಾವು ಹೋಗುವುದಾಗಿ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. 1 ನೇ ಆರೋಪಿಯು ನನ್ನೊಂದಿಗೆ ಯಾವತ್ತೂ ಮಾತನಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ದಾಂಪತ್ಯ ಜೀವನದ ಬಗ್ಗೆ ನನಗೆ ಯಾವತ್ತೂ ಹೇಳಿಲ್ಲ. 1 ನೇ ಆರೋಪಿಯು ಯಾವಾಗ ತನ್ನ ತವರ ಮನೆಗೆ ಹೋಗುತ್ತಿದ್ದರು ಅಂತ ನಮಗೆ ಖುದ್ದಾಗಿ ಹೇಳುತ್ತಿರಲಿಲ್ಲ ಫೋನ್ ಮಾಡಿ ಬಸವರಾಜರವರಿಗೆ ತಿಳಿಸುತ್ತಿದ್ದರು.

6. ನಾನು ನನ್ನ ಗಂಡನ ಮಾತು ಕೇಳಿ 1 ನೇ ಆರೋಪಿ ಮನೆ ಬಿಟ್ಟು ಹೋದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಆರೋಪಿಯ ಮತ್ತು ಮೃತ ಬಸವರಾಜರವರ ನಡುವೆ ಆದ ಸಂಭಾಷಣೆಯನ್ನು ನಾನು ಕಣ್ಣಾರೆ ನೋಡಿಲ್ಲ ಅಂದರೆ ಆ ವಿಷಯ ನಮಗೆ ತಿಳಿದು ಬಂತು. ಮೃತ ಬಸವರಾಜರವರು ನನ್ನೊಂದಿಗೆ ಯಾವತ್ತೂ ಮಾತನಾಡಿಲ್ಲ ಅಂದರೆ ಸರಿಯಲ್ಲ. ಮೃತ ಬಸವರಾಜರವರು Death Note ಏನೂ ಬರೆದಿಲ್ಲ ಅಂದರೆ ಸರಿಯಲ್ಲ.

7. ಮೃತ ಬಸವರಾಜರವರು ಬೆಳಿಗ್ಗೆ 10.00-11.00 ಗಂಟೆ ಒಳಗಡೆ ಮಾಡಿಕೊಂಡಿದ್ದಾರೆ. ಮೊದಲಿಗೆ ನಮ್ಮ ಅತ್ತೆಯವರು ಮೃತ ಬಸವರಾಜರವರು ನೇಣು ಹಾಕಿಕೊಂಡಿದ್ದು ನೋಡಿರುತ್ತಾರೆ. ಈ ವಿಷಯ ನಮಗೆ ಊರಿನ ಜನರಿಂದ ಗೊತ್ತಾಯಿತು. ಆಗ ನನ್ನ ಗಂಡ ಮನೆಯಲ್ಲಿ ಇರಲಿಲ್ಲ. ಆ ವಿಚಾರ ತಿಳಿದ ನಂತರ ನಾವು ದೂರನ್ನು ಕೊಡಲಿಲ್ಲ, ಸಂಜೆ ಹೋಗಿ ದೂರನ್ನು ಕೊಟ್ಟಿರುತ್ತಾರೆ. ನಾನು ಮೃತ ಬಸವರಾಜರವರ ಕೋಣೆಯನ್ನು ಪರಿಶೀಲನೆ ಮಾಡಿಲ್ಲ. ಯಾಕೆಂದರೆ ನಮಗೆ ಒಳಗಡೆ ಹೋಗಲು

ಬಿಡಲಿಲ್ಲ. ಅಷ್ಟರಲ್ಲಿ ಪೊಲೀಸರು ಇನ್ನೂ ಬಂದಿರಲಿಲ್ಲ. ನನ್ನ ಮೈದುನ ಮಕ್ಕಳು ಮನೆಯಲ್ಲಿ ಇರಲಿಲ್ಲ. ಇನ್ನೊಬ್ಬ ಮೈದುನ ಅಡುಗೆ ಕೆಲಸಕ್ಕೆ ಹೋಗಿದ್ದರು. ಮೃತ ಬಸವರಾಜರವರು ನೇಣು ಹಾಕಿಕೊಂಡ ನಂತರ ನಾನು ನನ್ನ ಗಂಡನೊಂದಿಗೆ ಮಾತನಾಡಿಲ್ಲ. ಅದರ ಬಾಬ್ತು ಊರಿನ ಜನರು ಮಾತನಾಡಿಕೊಳ್ಳುತ್ತಿದ್ದರು. ಆ ದಿನ 1 ನೇ ಆರೋಪಿಯು ಮನೆಯಲ್ಲಿ ಇರಲಿಲ್ಲ. ಮೃತ ಬಸವರಾಜರವರು ನೇಣು ಹಾಕಿಕೊಂಡ ದಿನ ಬೆಳಿಗ್ಗೆ ಏನಾಯಿತು ಅಂತ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಮೃತ ಬಸವರಾಜರವರು ಅವರ ತಾಯಿಯೊಂದಿಗೆ ಮಾತನಾಡಿದ ಸಂಪೂರ್ಣ ವಿಷಯ ನನಗೆ ಗೊತ್ತಿದೆ. ನನ್ನ ಗಂಡ ಹೇಳಿ ಕೊಟ್ಟ ಹಾಗೆ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಅಕ್ಕಪಕ್ಕದವರು ನನಗೆ ಮೇಲೆ ಹೇಳಿದ ವಿಚಾರ ತಿಳಿಸಿಲ್ಲ ಅಂದರೆ ಸರಿಯಲ್ಲ. ನನ್ನ ಮೈದುನನೇ ಹೋಗಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು ಅಂದರೆ ನಿಜ. ಸಾಕ್ಷಿದಾರರುಹೇಳುತ್ತಾರೆ 1 ನೇ ಆರೋಪಿಯು ಬಲವಂತ ಮಾಡಿದ ಮೇರೆಗೆ ಮೃತ ಬಸವರಾಜರವರು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. ನಾನು, ನನ್ನ ಗಂಡ, ನನ್ನ ಅತ್ತೆ, ನನ್ನ ಮೈದುನ, ಮೈದುನನ ಹೆಂಡತಿ ಬಲವಂತ ಮಾಡಿದ್ದಕ್ಕೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು ಅಂದರೆ ಸರಿಯಲ್ಲ.

8. ಮೊದಲಿನಿಂದಲೂ ನನಗೆ 1 ನೇ ಆರೋಪಿಯು ನನ್ನ ಮೈದುನ ಹೆಂಡತಿಯಾಗಿರುವುದು ಇಷ್ಟ ಇರಲಿಲ್ಲ ಅಂದರೆ ಸರಿಯಲ್ಲ. ಮೃತ ಬಸವರಾಜರವರು ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದರು ಅಂದರೆ ಸರಿಯಲ್ಲ. ನನ್ನ ಮೈದುನ ವೈಯಕ್ತಿಕ ನಿರ್ಧಾರದಿಂದ ಆತ್ಮಹತ್ಯೆ ಮಾಡಿಕೊಂಡರು ಅಂದರೆ ಸರಿಯಲ್ಲ. ಆ ವಿಷಯವನ್ನು ಮುಚ್ಚಿ ಇಟ್ಟು ಆರೋಪಿತರ ವಿರುದ್ಧ ಸುಳ್ಳುದೂರು ಕೊಟ್ಟು ಅದಕ್ಕೆ ಪೂರಕವಾಗಿ ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತ ಬಸವರಾಜರವರ ಆಸ್ತಿ ಹಣ ಲಪಾಟಿಸುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ

ಸರಿಯಲ್ಲ. ನಾನುಹೇಳಿದ ರೀತಿಯಲ್ಲಿ ಆ ದಿನ ಘಟನೆಯಾಗಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಪಿ.ಕೆ.ಬಿ., ವಕೀಲರಿಂದ 2 ನೇ ಆರೋಪಿತರ ಪರವಾಗಿ**:

9. ಮೃತ ಬಸವರಾಜರವರು ತೀರಿಕೊಂಡಾಗ ಅವರ ಮಗಳ ವಯಸ್ಸು 04 ವರ್ಷ ಮತತು ಮಗನ ವಯಸ್ಸು 02 ವರ್ಷ ಇತ್ತು. 02-03 ವರ್ಷಗಳ ಕಾಲ ಮೃತ ಬಸವರಾಜ ಮತ್ತು 1 ನೇ ಆರೋಪಿಯು ಚೆನ್ನಾಗಿದ್ದರು. ನಾನು Death note ನ್ನು ಓದಿದ್ದೇನೆ. ಅದರಲ್ಲಿ ಏನೇನು ಬರೆದಿದ್ದಾರೆ ಅಂತ ನನಗೆ ಗೊತ್ತಿದೆ. Death Note ನಲ್ಲಿ ಮೃತ ಬಸವರಾಜರವರು ನನ್ನ ಗಂಡನಿಗೆ ಸಾಲ ಕೊಟ್ಟ ಬಗ್ಗೆ ಬರೆದಿದ್ದಾರೆ ಅಂದರೆ ಸಾಲ ಕೊಟ್ಟಿಲ್ಲ. Death Note ನಲ್ಲಿ ದಿಃ 01-08-2021 ರಂದು ₹50,000/- ರೂಪಾಯಿ ಸಾಲವನ್ನು 2 ನೇ ಅಣ್ಣನಿಗೆ ಕೊಟ್ಟ ಬಗ್ಗೆ ನಮೂದು ಆಗಿದೆ ಅಂದರೆ ಸರಿಯಲ್ಲ. ಮೃತ ಬಸವರಾಜರವರು ಪ್ರೀತಿಸಿ ಮದುವೆಯಾಗಿರುವುರಿಂದ ನಾವು ಮನೆಯವರೆಲ್ಲಾ ಸೇರಿ ಅವರಿಗೆ ಮಾನಸಿಕವಾಗಿ ಹಿಂಸೆ ಕೊಡುತ್ತಿದ್ದೆವು ಅಂದರೆ ಸರಿಯಲ್ಲ. ನಮಗೆ ಸಂಪೂರ್ಣ ಆರ್ಥಿಕ ಬೆಂಬಲವನ್ನು ಮೃತ ಬಸವರಾಜರವರೇ ನೀಡುತ್ತಿದ್ದರು ಅಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ನಿಪಿ-5 ರಲ್ಲಿ ದಾವಣಗೆರೆಯಲ್ಲಿ ಮತ್ತು ಬ್ಯಾಂಕ್ LIC ನಲ್ಲಿ ₹3,00,000/- Mutual fund ಗೆ ಇದ್ದು, ₹2,50,000/- ರೂಪಾಯಿ ಬ್ಯಾಂಕ್ ಅಕೌಂಟ್ ನಲ್ಲಿ ಇದ್ದ ಬಗ್ಗೆ ನಮೂದಾಗಿದೆ ಅಂದರೆ ಇದನ್ನೆಲ್ಲಾ ಅವರ ಹೆಂಡತಿಗೆ ನಾಮಿನಿ ಮಾಡಿದ್ದರು. ನಿಪಿ-5 ರಲ್ಲಿ "ನನ್ನ ಹೆಂಡತಿಗೆ ಶಿಕ್ಷೆ ಕೊಡಬೇಕು" ಅಂತ ಬರೆದಿದ್ದಾರೆ ಅಂದರೆ ನಿಜ. ಮೃತ ಬಸವರಾಜರವರಿಗೆ ಸಣ್ಣ ಸಣ್ಣ ವಿಚಾರಕ್ಕೆ ಮಾನಸಿಕವಾಗಿ ಕುಗ್ಗಿದ್ದರು ಮತ್ತು ಸಾಯಿಸುವುದಕ್ಕೆ ಪ್ರಯತ್ತಿಸಿದ್ದರು ಅಂದರೆ ಸರಿಯಲ್ಲ. ಸಾಕ್ಷಿದಾರರು ಹೇಳುತ್ತಾರೆ ಅವರು ಮಾನಸಿಕವಾಗಿ ಕುಗ್ಗಿದ್ದು ನಿಜ. ಮೃತ ಬಸವರಾಜರವರು ನಿಪಿ-5 ರಲ್ಲಿ "ಮಕ್ಕಳಿಗೆ ಮೋಸ ಮಾಡಬಾರದು, ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ" ಅಂತ ಬರೆದಿದ್ದಾರೆ ಅಂದರೆ ನಿಜ. ಮೃತ ಬಸವರಾಜರವರಿಗೆ ನಮ್ಮ ಮೇಲೆ ನಂಬಿಕೆ

ಇರಲಿಲ್ಲ ಅಂದರೆ ಸರಿಯಲ್ಲ. ಎರಡು Death Note ಗಳನ್ನು ಮೃತ ಬಸವರಾಜರವರು ಬರೆದಿರುತ್ತಾರೆ ಅಂದರೆ ನಿಜ. ಮೃತ ಬಸವರಾಜರವರು ಮಾನಸಿಕವಾಗಿರುವುದರಿಂದ ಒಂದೇ ವಿಷಯವನ್ನು ಎರಡು ಸಾರಿ ಬರೆದಿದ್ದಾರೆ ಅಂದರೆ ಅವರು ಮಾನಸಿಕವಾಗಿ ಬಹಳ ಕುಗ್ಗಿದ್ದರು. ಮೃತ ಬಸವರಾಜರವರಿಗೆ ಸೈಟ್ ಇದ್ದ ಬಗ್ಗೆ ನನಗೆ ಗೊತ್ತಿತ್ತು.

10. ಮೃತ ಬಸವರಾಜರವರು SSLC ವರೆಗೆ ಓದಿರಬಹುದು. ಮೃತ ಬಸವರಾಜರವರ ಮೊಬೈಲ್ ಸಂಖ್ಯೆಯ ಕೊನೆಯ ಸಂಖ್ಯೆಗಳು ನನಗೆ ಗೊತ್ತಾ ಅಂದರೆ ಅವರು ನನ್ನ ಜೊತೆ ಮಾತನಾಡುತ್ತಿರಲಿಲ್ಲ ನನ್ನ ಅಣ್ಣನ ಜೊತೆ ಮಾತನಾಡುತ್ತಿದ್ದರು. ನನ್ನ ಗಂಡನ ಮಾತು ಕೇಳಿ ಈ ರೀತಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಮತ್ತು ಮೃತ ಬಸವರಾಜರವರ ನಡುವೆ ₹50,000/- ರೂಪಾಯಿಗೆ ಜಗಳ ಆಗಿತ್ತು ಅಂದರೆ ಸರಿಯಲ್ಲ. ಭಾತಿಯಲ್ಲಿ ಹೆಣ್ಣು ವ ಮಗು ಅಜ್ಜಿಯ ಜೊತೆ ವಾಸವಿದ್ದು,1 ನೇ ಆರೋಪಿ, ಮೃತ ಬಸವರಾಜ ಮತ್ತು ಮಗನ ಜೊತೆ ವಾಸವಿದ್ದರು ಅಂದರೆ ನಿಜ. ಮಗುವಿನ ಹೆಸರಿನಲ್ಲಿ ಎಲ್ಲಾ ಆಭರಣಗಳನ್ನು ಮತ್ತು ಹಣಕಾಸಿನ ವ್ಯವಸ್ಥೆ ಮೃತ ಬಸವರಾಜರವರು ಮಾಡಿ ಇಟ್ಟಿದ್ದರು ಅಂದರೆ ನಿಜ. ನಮ್ಮ ಮನೆಯವರೆಲ್ಲಾ ಮೃತ ಬಸವರಾಜರವರು ಮಾಡಿದ ಆಸ್ತಿ ಮತ್ತು ಆಭರಣಗಳ ಮೇಲೆ ಆಸೆ ಇಟ್ಟಿದ್ದೆವು ಅಂದರೆ ಸರಿಯಲ್ಲ. ಆ ಆಭರಣಗಳು ಆಸ್ತಿಗಳು ನಮ್ಮದೇ ಆಗಬೇಕು ಅಂತ ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತ ಬಸವರಾಜರವರು ವೈಯಕ್ತಿಕವಾಗಿ ಮಾನಸಿಕವಾಗಿ ನೊಂದುಕೊಂಡಿದ್ದರು ಅಂದರೆ ಹೆಂಡತಿಯ ವಿಚಾರಕ್ಕೆ ನೊಂದುಕೊಂಡಿದ್ದರು. ಮೃತ ಬಸವರಾಜರವರು ನೇಣು ಹಾಕಿಕೊಂಡ ಬಗ್ಗೆ ನನ್ನ ಗಂಡನಿಗೆ ಅಕ್ಕಪಕ್ಕದವರಿಂದ ಗೊತ್ತಾಯಿತು ಅಂದರೆ ನಿಜ. ಆಗ ನನ್ನ ಮೊಬೈಲ್ ನಲ್ಲಿ ಕರೆನ್ಸಿ ಇರಲಿಲ್ಲ. ಮೃತ ಬಸವರಾಜರವರು ತೀರಿಕೊಂಡಾಗ ನನ್ನ ಬಳಿ ಇದ್ದ ಸಿಮ್ ನಂಬರ ಈಗ ನನ್ನ ಬಳಿ ಇಲ್ಲ. ನನ್ನ ಮೊಬೈಲ್ ಸಂಖ್ಯೆ 9945157803 ಇರುತ್ತದೆ. ಈ

ಮೊಬೈಲ್ ಸಂಖ್ಯೆಯ ಬಗ್ಗೆ ಪೊಲೀಸರು ನನ್ನ ಕಡೆಯಿಂದ ಮಾಹಿತಿ ಪಡೆದುಕೊಂಡಿದ್ದರು. ನನ್ನ ಗಂಡನ ಕಡೆಯಿಂದ ಪೊಲೀಸರು ಫೋನ್ ನಂಬರ ಬಗ್ಗೆ ಮಾಹಿತಿ ಪಡೆದುಕೊಂಡರಾ ಅಂದರೆ ನನಗೆ ಗೊತ್ತಿಲ್ಲ.

11. ನಾವೆಲ್ಲಾ ಬೇರೆಯಾದ ನಂತರ 1 ನೇ ಆರೋಪಿ ಮತ್ತು ಮೃತ ಬಸವರಾಜರವರು ಮದುವೆಯಾಗಿ ಬಂದರು. ಮೃತ ಬಸವರಾಜರವರ ಮಗಳನ್ನು ನಮ್ಮ ಅತ್ತೆಯವರು ಸಾಕುತ್ತಿದ್ದಾರೆ. ನಮ್ಮ ಅತ್ತೆಯವರು ಕೆಚೆನಹಳ್ಳಿಯಲ್ಲಿ ವಾಸವಿದ್ದಾರೆ. ಮೃತ ಬಸವರಾಜರವರು ಬ್ಯಾಂಕ್ ನಲ್ಲಿ ಇಟ್ಟ ಹಣ ಮತ್ತು ಆಭರಣಗಳನ್ನು ನಾವು ಯಾರೂ ಬಿಡಿಸಿಕೊಂಡಿಲ್ಲ. ಮೃತ ಬಸವರಾಜರವರು ತೀರಿಕೊಂಡ ನಂತರ ನಾನು ಮತ್ತು ನನ್ನ ಗಂಡ 1 ನೇ ಆರೋಪಿಯ ಜೊತೆ ಆಭರಣಗಳು ಮತ್ತು ಹಣದ ಬಗ್ಗೆ ಚರ್ಚೆ ಮಾಡಿದರು ಅಂದರೆ ಸರಿಯಲ್ಲ. ಅದಕ್ಕೆ 1 ನೇ ಆರೋಪಿಯು ಯಾವುದೇ ಕಾರಣಕ್ಕೂ ಹಣ, ಆಸ್ತಿ,ಆಭರಣ ಕೊಡುವುದಿಲ್ಲ ಮಕ್ಕಳಿಗೋಸ್ಕರ ಬೇಕು ಅಂತ ಹೇಳಿದರು ಅಂದರೆ ನಿಜ. ನಮಗೆ ಲಾಭ ಆಗಲು ಅನಾವಶ್ಯಕವಾಗಿ 2 ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸೇರಿಸಿದ್ದೇವೆ ಅಂದರೆ ಸುನಿಲ್ ರವರ ಪರಿಚಯ ನಮಗೆ ಇಲ್ಲ, 1 ನೇ ಆರೋಪಿಗೆ 2 ನೇ ಆರೋಪಿಯ ಪರಿಚಯ ಇದೆ.

12. ಈಗ ನನಗೆ ತೋರಿಸಿದ ನಿಪಿ-7(ಡಿ) ಮೃತ ಬಸವರಾಜರವರ ಬರವಣಿಗೆಯಲ್ಲಿ ಇರುತ್ತದೆ. ಈಗ ನನಗೆ ತೋರಿಸಿದ ನಿಪಿ-7(ಇ) ಮೃತ ಬಸವರಾಜರವರ ಬರವಣಿಗೆಯಲ್ಲಿ ಇರುವುದಿಲ್ಲ. ಆ ಬರವಣಿಗೆ ಯಾರದ್ದು ಅಂತ ನನಗೆ ಗೊತ್ತಿಲ್ಲ. ನಿಪಿ7(ಸಿ) ರಲ್ಲಿ ಉಮಾರವರ ತಂದೆ ದುಡ್ಡಿನ ಸಹಾಯ ಮೃತ ಬಸವರಾಜರವರಿಗೆ ಮಾಡಿದ್ದಾರೆ ಅಂತ ಬರೆದಿದ್ದಾರೆ ಅಂದರೆ ನಿಜ. ಅದರಲ್ಲಿ 9 ಲಕ್ಷದಷ್ಟು ಹಣ ಸಹಾಯ ಮಾಡಿದ್ದಾರೆ ಅಂತ ಬರೆದಿದ್ದಾರೆ ಅಂದರೆ ಹಣ ಕೊಟ್ಟಿರುವುದು ನಮಗೆ ಗೊತ್ತಿಲ್ಲ. ಮೃತ ಬಸವರಾಜರವರು ತೀರಿಕೊಳ್ಳುವ ಕಾಲಕ್ಕೆ ಗೋದರೆಜ ಬೀರುವಿನ ಕೀ ನಮ್ಮ ಅತ್ತೆಯ ಬಳಿ ಇರುತ್ತದೆ. ಅದರಲ್ಲಿ ಇದ್ದಂತಹ ಆಭರಣಗಳು ನಮ್ಮ ಅತ್ತೆಯ ಹತ್ತಿರ ಇರುತ್ತವೆ. ನಾನು ಮತ್ತು ನಮ್ಮ ಮೈದುನ ಸೇರಿ ಮೃತ ಬಸವರಾಜರವರಿಗೆ ಕೊಡಬೇಕಾದ ಹಣ ವಾಪಸ್ಸು ಕೊಡುತ್ತಿರಲಿಲ್ಲ ಅಂದರೆ ಸರಿಯಲ್ಲ. ನಮ್ಮ

ಮನೆಯ ಜನರ ಹಿಂಸೆ ತಾಳಲಾರದೇ ಮೃತ ಬಸವರಾಜರವರು ಆತ್ಮಹತ್ಯೆ ಮಾಡಿಕೊಂಡರು ಅಂದರೆ ಸರಿಯಲ್ಲ. ಈ ಪ್ರಕರಣದ ಸಂಪೂರ್ಣ ಮಾಹಿತಿ ಇರುವುದಿಲ್ಲ ನನ್ನ ಗಂಡ ಹೇಳಿದ ಮೇರೆಗೆ ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

13. ನನ್ನ ಗಂಡ ಆ ದಿನ ಸುದ್ದಿ ಕೇಳಿದ ಕೂಡಲೇ ಅವರು ಅಡುಗೆ ಕೆಲಸಕ್ಕೆ ಹೋದವರು ವಾಪಸ್ಸು ಬಂದಾಗ 11.30 ಗಂಟೆ ಆಗಿತ್ತು. ಪೊಲೀಸರು ಬರುವ ಮುಂಚೆ ಊರಿನ ಜನರು ಬಾಗಿಲಿನ ಚೀಲಕ ತೆಗೆದಿದ್ದರು ಅಂದರೆ ಬಾಗಿಲಿನ ಚೀಲಕ ಹಾಕಿರಲಿಲ್ಲ. ನಿಪಿ-5 ಮತ್ತು 6 ನ್ನು ನಾವೇ ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.